# ಬ್ಲಾಕ್ ಡೈಮಂಡ್

ಟೆಸ್ಟ್ ಕ್ರಿಕೆಟ್‌ನ ಸಾಂಪ್ರದಾಯಿಕ ವರಸೆ, ಏಕದಿನದ ವೇಗ, ಚುಟುಕು ಕ್ರಿಕೆಟ್‌ನ ಪರಮ ವೇಗ ಈ ಮೂರಕ್ಕೂ ಒಗ್ಗಿಕೊಂಡಿರುವ ದಕ್ಷಿಣ ಆಫ್ರಿಕಾದ ಕಗಿಸೊ ರಬಾಡಾ ಕ್ರಿಕೆಟ್‌ನ ಚೆಲುವನ್ನು ಹೆಚ್ಚಿಸುತ್ತಿರುವ ಪ್ರತಿಭಾವಂತ ಆಟಗಾರ.

■ ವಿಶಾಖ ಎನ್.

ಹದಿನಾರು ವರ್ಷಗಳಾದವು; ಬಿ.ಎಸ್. ಚಂದ್ರಶೇಖರ್ ಅವರ ಮನೆಯ ವರಾಂಡದಲ್ಲಿ ಚುಟುಕು ಕ್ರಿಕೆಟ್ ಬಂದರೆ ಏನಾಗಬಹುದು ಎಂದು ಸಣ್ಣದೊಂದು ಚರ್ಚೆ ನಡೆಸಿ. ಈಗ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳನ್ನು ನೋಡುತ್ತಿದ್ದರೆ ಆ ಚರ್ಚೆಯಲ್ಲಿ ಚಂದ್ರು (ಅವರ ಆಪ್ತರು 'ಚಂದ್ರ' ಎಂದೇ ಅವರನ್ನು ಸಂಬೋಧಿಸುತ್ತಾರೆ) ಆಡಿದ್ದ ಮಾತೆಲ್ಲವನ್ನೂ ದೊಡ್ಡ ಮಳೆ ತೊಳೆದುಹಾಕಿದಂತೆ ಭಾಸವಾಗತೊಡಗಿದೆ. ಖುದ್ದು ಚಂದ್ರು ಅಸಾಂಪ್ರದಾಯಿಕ ಸ್ಪಿನ್ನರ್ ಆಗಿದ್ದವರು. ಇಂಗ್ಲೆಂಡ್‌ನ ಬೌನ್ಸಿ ಪಿಚ್‌ಗಳ ಮೇಲೆ ಅವರು ಸ್ಪಿನ್ನರ್ ಆಗಿಯೂ ಬೌನ್ಸರ್‌ಗಳನ್ನು ಒಗೆಯಬಲ್ಲವರಾಗಿದ್ದುದು ಅವರನ್ನು ಹತ್ತರಲ್ಲಿ ಹನ್ನೊಂದನೆಯವರು ಎಂದು ಅನೇಕರು ಶ್ಲಾಘಿಸಲು ಕಾರಣವಾಗಿತ್ತೆನ್ನಿ. ಚುಟುಕು ಕ್ರಿಕೆಟ್ ಶುರುವಾದರೆ ಆಟದ ಶಾಸ್ತ್ರೀಯತೆ ಮುಕ್ಕಾಗುತ್ತದೆ, ಟೆಸ್ಟ್ ಕ್ರಿಕೆಟ್‌ನ ಹರಿತ ಮೊಂಡಾಗುತ್ತದೆ ಎಂದೆಲ್ಲ ಸಹಜವಾಗಿಯೇ ಚಂದ್ರು ಹಳಹಳಿಸಿದ್ದರು.

ಮೈಸೂರಿನಲ್ಲಿ ಚಂದ್ರು ಹುಟ್ಟಿದ ಮೇ ತಿಂಗಳಲ್ಲೇ ದಕ್ಷಿಣ ಆಫ್ರಿಕಾದ ಜೊಹಾನ್ಸ್‌ಬರ್ಗ್‌ನ ಗಾಟೆಂಗ್‌ನಲ್ಲಿ ಜನ್ಮತಳೆದವರು ಕಗಿಸೊ ರಬಾಡಾ. ಚಂದ್ರು, ರಬಾಡಾ ಇಬ್ಬರಿಗೂ ಬರೋಬ್ಬರಿ ಐವತ್ತು ವರ್ಷಗಳ ಅಂತರ. ಲೆಗ್‌ಸ್ಪಿನ್ನರ್ ಚಂದ್ರು ಹತ್ತೊಂಬತ್ತರ ಪ್ರಾಯದಲ್ಲೇ ಮೊದಲ ಟೆಸ್ಟ್ ಆಡಿದ ಪ್ರತಿಭಾವಂತ. ಹದಿನೈದು ವರ್ಷಗಳ ಅಂತರರಾಷ್ಟ್ರೀಯ ಕ್ರಿಕೆಟ್ ಜೀವಮಾನದಲ್ಲಿ 58 ಟೆಸ್ಟ್‌ಗಳನ್ನು ಆಡಿದವರು. 242 ವಿಕೆಟ್‌ಗಳನ್ನು ಕಿತ್ತಿದ್ದು ಅವರ ಸಾಧನೆ. ನ್ಯೂಜಿಲೆಂಡ್ ವಿರುದ್ಧ 1976ರಲ್ಲಿ ಒಂದೇ ಒಂದು ಏಕದಿನ ಕ್ರಿಕೆಟ್ ಪಂದ್ಯ ಆಡಿದರಷ್ಟೆ. ಅದರಲ್ಲೂ ಅವರು ಮೂರು ವಿಕೆಟ್ ಪಡೆದಿದ್ದರು.

ಅವರಿಗಿಂತ 50 ವರ್ಷ ಸಣ್ಣವರು ರಬಾಡಾ. ಮೊನ್ನೆ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡದ ವಿರುದ್ಧದ ಚುಟುಕು ಕ್ರಿಕೆಟ್‌ನಲ್ಲಿ ಸೂಪರ್ ಓವರ್ ಬೌಲ್ ಮಾಡಿದರು. ಅವರು ಹಾಕಿದ ಚೆಂಡು ನುಗ್ಗಿಬಂದ ಪರಿಯನ್ನು ಅಂದಾಜು ಮಾಡಲು ವೆಸ್ಟ್‌ಇಂಡೀಸ್‌ನ ನಿಕೊಲಸ್ ಪೂರನ್‌ಗೆ ಆಗಲೇ ಇಲ್ಲ. ಡೆಲ್ಲಿ ಕ್ಯಾಪಿಟಲ್ಸ್ ಗೆಲ್ಲುವಲ್ಲಿ ರಬಾಡಾ ತೂರಿಬಿಟ್ಟ ಬಾಣದಂಥ ಆ ಎಸೆತದ ಕಾಣ್ಕೆ ದೊಡ್ಡದು.

